ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣಸ್ವಾಮಿ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್

ತ್ರಿಶೂಲ್ ಡೆವಲಪರ್ -ವಿರುದ್ಧ-ಎಲ್ & ಟಿ ಹೌಸಿಂಗ್ ಫೈನಾನ್ಸ್ ಅಮಿಟೆಡ್, ಮುಂಬೈ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 22137/2019 (ಜಿಎಂ-ಡಿ.ಆರ್.ಟಿ), ದಿನಾಂಕ 27 ನೇ ಜೂನ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್:

ಅರ್ಜಿದಾರ-ಪಾಲುದಾರಿಕೆ ಸಂಸ್ಥೆಯು, 20,00,00,000/- ರೂ.ಗಳ (ಇಪ್ಪತ್ತು ಕೋಟಿ ರೂಪಾಯಿಗಳ) ಮೊತ್ತವನ್ನು ಹಣಕಾಸು ನೆರವಾಗಿ ಮೊದಲ ಪ್ರತ್ಯರ್ಜಿದಾರ-ಹಣಕಾಸು ಸಂಸ್ಥೆಯಿಂದ,ದಿನಾಂಕ: 07.08.2015 ರ ಮಂಜೂರಾತಿ ಪತ್ರದ ಪ್ರಕಾರ, ಯೋಜನೆಗಳ ನಿರ್ಮಾಣವನ್ನು ಪೂರ್ಣಗೊಳಿಸುವ ಉದ್ದೇಶಕ್ಕಾಗಿ ಪಡೆದುಕೊಂಡಿತ್ತು.ಇದಕ್ಕೆ ತಪ್ಪಿದ್ದರಿಂದ, ಹಣಕಾಸು ಸ್ವತ್ತುಗಳ ಭದ್ರತೀಕರಣ ಮತ್ತು ಪುನಾರಚನೆ ಹಾಗೂ ಭದ್ರತಾ ಹಿತಾಸಕ್ತಿಗಳ ಜಾರಿ ಅಧಿನಿಯಮ, 2002 ರ (ಎಸ್ಆರ್ಎಫ್ಎಇಎಸ್ಐ ಅಧಿನಿಯಮ) ಉಪಬಂಧಗಳ ಮೇರೆಗೆ ಮೊದಲನೇ ಪ್ರತ್ಯರ್ಜಿದಾರರು ವ್ಯವಹರಣೆಗಳನ್ನು ಪ್ರಾರಂಭಿಸಿದಾಗ, ಇದರಲ್ಲಿನ ಅರ್ಜಿದಾರರು ಸಾಲ ವಸೂಲಾತಿ ನ್ಯಾಯಾಧಿಕರಣವನ್ನು (ಇದರಲ್ಲಿ ಇನ್ನು ಮುಂದೆ ` ಡಿಆರ್ಟಿ ' ಎಂದು ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ) ಸಂಪರ್ಕಿಸಿ, ಅರ್ಜಿದಾರರು ಯಾವುದೇ ಮೊತ್ತವನ್ನು ಪಡೆಯದಿರುವ ಸಂಬಂಧಪಡದ ಪಕ್ಷಕಾರರು ನೋಟೀಸನ್ನು ನೀಡಿದ್ದಾರೆಂಬ ಕಾರಣದ ಮೇಲೆ ತಗಾದೆ ನೋಟೀಸನ್ನು ಪ್ರಶ್ನಿಸಿದ್ದಾರೆ.ಸ್ವಾಧೀನ ನೋಟೀಸನ್ನು ಸಹಾ ವಜಾಗೊಳಿಸುವಂತೆ ಕೋರಲಾಗಿದೆ.

2.ದಿನಾಂಕ: 23.03.2018 ರ ಆದೇಶದ ಮೂಲಕ, ಡಿಆರ್ಟಿ ಇದು, ಅಪೀಲು ಎಸ್.ಎ.ಸಂಖ್ಯೆ: 76/2018 ಕ್ಕೆ ಅವಕಾಶ ನೀಡಿ,ದಿನಾಂಕ: 14.06.2017 ರ ತಗಾದೆ ನೋಟೀಸನ್ನು ಹಾಗೂದಿನಾಂಕ: 09.11.2017 ಮತ್ತು 10.11.2017 ರ ಸ್ವಾಧೀನ ನೋಟೀಸುಗಳನ್ನು ರದ್ದುಗೊಳಿಸಿದೆ.ಮೊದಲನೇ ಪ್ರತ್ಯರ್ಜಿದಾರರು, ಚೆನ್ನೈನಲ್ಲಿರುವ ಸಾಲ ವಸೂಲಾತಿ ಅಪೀಲು ನ್ಯಾಯಾಧಿಕರಣ (ಸಂಕ್ಷಿಪ್ತವಾಗಿ ' ಡಿಆರ್ಎಟಿ ') ವನ್ನು ಸಂಪರ್ಕಿಸಿದಾಗ, ಡಿಆರ್ಟಿ ಇದು,ದಿನಾಂಕ: 16/04/2019 ರ ಆದೇಶದ ಮೂಲಕ ಅಪೀಲಿಗೆ ಅವಕಾಶ ನೀಡಿದೆ.ತತ್ಪರಿಣಾಮವಾಗಿ, ಡಿಆರ್ಎಟಿ ಇದು ಹೊರಡಿಸಿದದಿನಾಂಕ: 16.04.2019 ರ ಆದೇಶವನ್ನು ಪ್ರಶ್ನಿಸಿ ಮತ್ತು ಡಿಆರ್ಟಿ -1, ಬೆಂಗಳೂರು ಇದು ಎಸ್.ಎ.ಸಂಖ್ಯೆ: 76/2018 ರಲ್ಲಿ ಹೊರಡಿಸಿದದಿನಾಂಕ: 23.03.2018 ರ ಆದೇಶವನ್ನು ಎತ್ತಿಹಿಡಿಯಲು ಕೋರಿ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

3. ಶ್ರೀ ಉದಯ್ ಹೊಳ್ಳ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು,ದಿನಾಂಕ: 14.06.2017 ರ ತಗಾದೆ ನೋಟೀಸನ್ನು ' ಎಲ್ & ಟಿ ಫೈನಾನ್ಸಿಯಲ್ ಸರ್ವೀಸಸ್ ' ಇದರ ವಿಳಾಸ ಪತ್ರದಲ್ಲಿ ನೀಡಲಾಗಿದೆ ಹಾಗೂ ' ಎಲ್ & ಟಿ ಫೈನಾನ್ಸ್ ಲಿಮಿಟೆಡ್'ನ ಪರವಾಗಿ ಅಧಿಕೃತ ಸಹಿದಾರರು ನೋಟೀಸಿಗೆ ಸಹಿ ಮಾಡಿದ್ದಾರೆ ಎಂದು ಡಿಆರ್ಟಿ -1 ಅಷ್ಟೇ ಅಲ್ಲದೆ ಡಿಆರ್ಟಿ ಸಮವರ್ತಿಯಾಗಿ ನಿರ್ಣಯಿಸಿರುವರೆಂದು ನಿವೇದಿಸಿಕೊಂಡಿದ್ದಾರೆ.ಡಿಆರ್ಎಟಿ ಇದು, ಇದರಲ್ಲಿನ ಮೊದಲನೇ ಪ್ರತ್ಯರ್ಜಿದಾರರು, ' ಎಲ್ & ಟಿ ಫೈನಾನ್ಸ್ ಲಿಮಿಟೆಡ್'ನ ಹೆಸರಿನಲ್ಲಿ ನೋಟೀಸನ್ನು ಜಾರಿ ಮಾಡುವಲ್ಲಿ ತಪ್ಪೆಸಗಿದ್ದಾರೆ ಎಂದು ನಿರ್ಣಯಿಸಿದೆ ಎಂದು

ಡಿಆರ್‌ಟಿ ಇದರ ಆದೇಶದ 11 ನೇ ಕಂಡಿಕೆಯಿಂದ ಕಂಡುಬರುತ್ತದೆ. 'ಎಲ್ಟಿ ಫೈನಾನ್ಸ್ ಲಿಮಿಟೆಡ್ ' ಇದು, ಇದರಲ್ಲಿನ ಅರ್ಜಿದಾರರು ಹಣವನ್ನು ಸಾಲ ಪಡೆದಿರುವುದಕ್ಕೆ ಭದ್ರತೆ ಪಡೆದ ಸಾಲ ಕೊಡುವ ಸಂಸ್ಥೆ ಅಲ್ಲವೆಂಬುದನ್ನು ಒಪ್ಪಿಕೊಳ್ಳಲಾಗಿದೆ.ಭದ್ರತೆ ಪಡೆದ ಸಾಲ ಕೊಡುವ ಸಂಸ್ಥೆ ' ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ' ಎಂಬುದನ್ನು ಸಹ ಒಪ್ಪಿಕೊಳ್ಳಲಾಗಿದೆ.ಒಪ್ಪಿಕೊಂಡ ನಿಲುವು ಇದಾಗಿರುವಲ್ಲಿ, ಡಿಆರ್ಟಿಯ ನಿರ್ಣಯವನ್ನು ಡಿಆರ್‌ಟಿಯೇ ವ್ಯತ್ಯಸ್ಥಗೊಳಿಸಬಾರದಿತ್ತು ಎಂಬುದು ವಾದವಾಗಿದೆ.

4. ಮಾನ್ಯ ಹಿರಿಯ ನ್ಯಾಯವಾದಿಗಳು, ನಿರ್ದಿಷ್ಟ ರೀತಿಯಲ್ಲಿ ಕೆಲಸ ಮಾಡಬೇಕೆಂದು ಶಾಸನವು ಉಪಬಂಧಿಸಿರುವಾಗ, ಅದನ್ನು ಅದೇ ರೀತಿಯಲ್ಲಿ ಮಾಡಬೇಕು ಮತ್ತು ಮತ್ತಾವುದೇ ರೀತಿಯಲ್ಲಿ ಅಲ್ಲ ಎಂದು ವಾದಿಸಲು ಚಂದ್ರ ಕಿಶೋರ್ ಝಾ ವಿರುದ್ಧ ಮಹಾವೀರ್ ಪ್ರಸಾದ್ ಮತ್ತು ಇತರರು (1999) 8 ಎಸ್ಸಿಸಿ 266, ಮೊಕದ್ದಮೆಯನ್ನು ಅವಲಂಬಿಸಿದ್ದಾರೆ.ಚಿಮನ್ಲಾಲ್ ವಿರುದ್ಧ ಮಿಶ್ರಿಲಾಲ್ (1985) 1 ಎಸ್ಸಿಸಿ 14, ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಶಾಸನದ ಪ್ರಕಾರ ಸಿಂಧುವಾದ ನೋಟೀಸ್, ಅದರಲ್ಲಿನ ವ್ಯವಹರಣೆಗಳನ್ನು ನಿರ್ವಹಿಸಲು ಪೂರ್ವ-ಷರತ್ತಾಗಿದೆ ಎಂದು ನಿರ್ಣಯಿಸಿದೆ ಎಂಬುದರ ಕಡೆ ಗಮನ ಸೆಳೆಯಲಾಯಿತು.ಇದಲ್ಲದೆ ಮಾನ್ಯ ಹಿರಿಯ ನ್ಯಾಯವಾದಿಗಳು, ಎಸ್‌ಎಆರ್‌ಎಫ್‌ಇಎಸ್‌ಐ ಅಧಿನಿಯಮ, 2002 ರ 13( 2) ನೇ ಪ್ರಕರಣದ ಅಡಿಯಲ್ಲಿ ದೋಷಯುಕ್ತ ನೋಟೀಸ್ ಸಮರ್ಥನೀಯವಲ್ಲವೆಂಬ ತಮ್ಮ ವಾದವನ್ನು ಪುಷ್ಟೀಕರಿಸಲು, ಪ್ರದೀಪ್ ಕುಮಾರ್ ದಾಸ್ ಮತ್ತು ಇತರರು -ವಿರುದ್ಧ-ಸಹಾಯಕ ಮಹಾ ವ್ಯವಸ್ಥಾಪಕರು, ಯೂನಿಯನ್ ಬ್ಯಾಂಕ್ ಮತ್ತು ಇನ್ನೊಬ್ಬರು2010 ಎಸ್ಸಿ ಆನ್ಲೈನ್ ಕಾಲ್, 1629 ಮೊಕದ್ದಮೆಯಲ್ಲಿನ ನಿರ್ಣಯವನ್ನು ಅವಲಂಬಿಸಿದ್ದಾರೆ.ಅದೇ ರೀತಿಯಲ್ಲಿ, ಮ್ಯಾಥಿವ್ ವರ್ಗಿಸ್ ವಿರುದ್ಧ-ಎಮ್.ಅಮೃತಕುಮಾರ್ ಮತ್ತು ಇತರರು (2014) 5 ಎಸ್ಸಿಸಿ 610 ಮೊಕದ್ದಮೆಯಲ್ಲಿ, ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮ, 2002 ರ ಉಪಬಂಧಗಳನ್ನು ಅರ್ಥೈಸುವಾಗ, ನಿಯಮಿಸಲಾದ ಪ್ರಕ್ರಿಯೆಯ ಅನುಪಾಲನೆಯನ್ನು ಕಡ್ಡಾಯವಾಗಿ ಅನುಸರಿಸುವುದು ಕಡ್ಡಾಯವಾಗಿದೆ ಎಂದು ನಿರ್ಣಯಿಸಲಾಗಿದೆ.

5. ಇದಕ್ಕೆ ತದ್ವಿರುದ್ಧವಾಗಿ, ಅರ್ಜಿದಾರ ಸಂಸ್ಥೆಯು,ದಿನಾಂಕ: 14.06.2017 ರ ತಗಾದೆ ನೋಟೀಸಿಗೆ ನೀಡಿದದಿನಾಂಕ: 08.08.2017 ರ ಅದರ ಉತ್ತರದಲ್ಲಿ, ಅದನ್ನು ' ಎಲ್ & ಟಿ ಫೈನಾನ್ಸ್ ಲಿಮಿಟೆಡ್'ಗೆ ನೀಡಿದಾಗ್ಯೂ, ' ಎಲ್ & ಟಿ ಫೈನಾನ್ಸ್ ಲಿಮಿಟೆಡ್'ನಿಂದ ಯಾವುದೇ ಸಾಲವನ್ನು ಅದು ಪಡೆದಿರುವುದಿಲ್ಲವೆಂಬುದನ್ನು ವಿರೋಧಿಸಿರುವುದಿಲ್ಲವೆಂದು; ಅರ್ಜಿದಾರ ಸಂಸ್ಥೆಗೆ, ' ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್'ನಿಂದ ಸಾಲವನ್ನು ಅದು ತೆಗೆದುಕೊಂಡಿರುವುದರ ಅರಿವು ಚೆನ್ನಾಗಿಯೇ ಇತ್ತೆಂದು, ಸಾಲ ತೆಗೆದುಕೊಂಡಿರುವುದನ್ನು ಒಪ್ಪಿಕೊಂಡಿದೆಯಾದರೂ, ಹಣಕಾಸು ದಸ್ತಾವೇಜುಗಳ ನಿಬಂಧನೆಗಳು ಮತ್ತು ಷರತ್ತುಗಳ ಉಲ್ಲಂಘನೆಗಳನ್ನು/ಭಂಗಗಳನ್ನು ಎಸಗಿರುವುದು; ಉಚ್ಚ ನ್ಯಾಯಾಲಯದ ಮುಂದೆ ಹೇಳಿಕೆಯನ್ನು ನೀಡಿದ್ದಾಗ್ಯೂ ಚ ಫ್ಲಾಟ್ಗಳ ಮಾರಾಟಕ್ಕೆ ನಿರಾಕ್ಷೇಪಣಾ ಪ್ರಮಾಣಪತ್ರಗಳನ್ನು ನೀಡಿರುವುದಿಲ್ಲ; ಬಾಕಿ ಇರುವ ಸಾಲದ ಮೊತ್ತ ಮತ್ತು ಇತರ ಪ್ರಾಸಂಗಿಕ ವಿಷಯಗಳ ಪರಿಮಾಣಗಳಂಥ ಕಾರಣಗಳ ಆಧಾರದ ಮೇಲೆ ಮರು-ಪಾವತಿಯ ಕ್ಲೇಮನ್ನು ವಿರೋಧಿಸಿದೆ ಎಂದು ಪ್ರತ್ಯರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯಾಧೀಶರಾದ ಶ್ರೀ ಶಶಿಕಿರಣ್ ಶೆಟ್ಟಿಯವರು ನಿವೇದಿಸಿಕೊಂಡಿದ್ದಾರೆ.ವಾಸ್ತವವಾಗಿ, ಅರ್ಜಿದಾರರು ಸಾಲವನ್ನು ಪಡೆದುಕೊಂಡಿರುವುದನ್ನು ಒಪ್ಪಿಕೊಂಡಿದ್ದಾರೆಂಬುದು ಮತ್ತು ಯಾವುದೇ ಕಾನೂನುಸಮ್ಮತ ಬಾಕಿಗಳ ಪಾವತಿಯನ್ನು ತಪ್ಪಿಸುವುದು ಎಂದಿಗೂ ಅವರ ಉದ್ದೇಶವಾಗಿರಲಿಲ್ಲವೆಂಬುದು ಅವರ ಉತ್ತರದಿಂದ

ಕಂಡುಬರುತ್ತದೆ.ಆದುದರಿಂದ, ಮಾನ್ಯ ಹಿರಿಯ ನ್ಯಾಯವಾದಿಗಳು, ತಗಾದೆ ನೋಟೀಸಿನ ' ಅಡಿ ಟಿಪ್ಪಣಿ'ಯಲ್ಲಿ ಕಂಡುಬರುವಂತೆ, ತಗಾದೆ ನೋಟೀಸು, ' ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ' ಇದು ಬಳಸುವ ವಿಳಾಸದೋಲೆಯಾಗಿರುವ ' ಎಲ್ & ಟಿ ಫೈನಾನ್ಸ್ ಸರ್ವೀಸಸ್'ನ ವಿಳಾಸದೋಲೆಯಲ್ಲಿ, ' ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ' ಇದು ನೀಡಿದ್ದಂಥದ್ದಾಗಿತ್ತೆಂದು ಅರ್ಜಿದಾರರಿಗೆ ತಿಳಿದಿತ್ತು ಮತ್ತು ಅರಿವಿಗೆ ಬಂದಿತ್ತೆಂದು ವಾದಿಸಿದ್ದಾರೆ.ಇದಲ್ಲದೆ ಮಾನ್ಯ ಹಿರಿಯ ನ್ಯಾಯವಾದಿಗಳು, ಈ ಸಂಗತಿಗಳನ್ನು ಡಿಆರ್‌ಟಿ ಎಚ್ಚರಿಕೆಯಿಂದ ಗಮನಿಸಿ, ಭದ್ರತೆ ಪಡೆದ ಸಾಲದಾತರಾಗಿರುವ ಮೊದಲನೇ ಪ್ರತ್ಯರ್ಜಿದಾರರು ಮಾಡಿದ ತಪ್ಪಿನ ಅನುಕೂಲವನ್ನು ತೆಗೆದುಕೊಳ್ಳಲು ಅರ್ಜಿದಾರರಿಗೆ ಅನುಮತಿ ನೀಡಬಾರದೆಂದು ಸರಿಯಾಗಿಯೇ ನಿರ್ಣಯಿಸಿದೆ ಎಂದು ನಿವೇದಿಸಿಕೊಂಡಿದ್ದಾರೆ.

6. ಮಾನ್ಯ ಹಿರಿಯ ನ್ಯಾಯವಾದಿಗಳು, ಪೂರಣ್ ಲಾಲ್ ಆರ್ ಮತ್ತು ಇತರರು ವಿರುದ್ಧ ಉತ್ತರಾಂಚಲ ರಾಜ್ಯ ಮತ್ತು ಇತರರು 2005 ಎಸ್ಸಿಸಿ ಆನ್ಲೈನ್ ಯುಟಿಟಿ 50 ಮೊಕದ್ದಮೆಯಲ್ಲಿ ಉತ್ತರಾಂಚಲ ಉಚ್ಚ ನ್ಯಾಯಾಲಯದ ನಿರ್ಣಯವನ್ನವಲಂಬಿಸಿದ್ದು, ಅದರಲ್ಲಿ ಚ ವಿಭಾಗೀಯ ಪೀಠವು, ನೋಟೀಸನ್ನು ನೀಡಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಬಾಕಿ ಸಾಲಗಳನ್ನು ತೀರಿಸಲು ಅರ್ಜಿದಾರರನ್ನು ಅಗತ್ಯಪಡಿಸಿ ಅನುಬಂಧ -4 ರಲ್ಲಿನ ನೋಟೀಸಿನಲ್ಲಿನ ತಾಂತ್ರಿಕ ತಪ್ಪನ್ನು, ವಾಸ್ತವದಲ್ಲಿ ಅರ್ಜಿದಾರರಿಗೆ 13 ( 2) ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ಅಗತ್ಯ ಸಮಯವನ್ನು ನೀಡಲಾಗಿದ್ದರೂ ಮತ್ತು ಅರ್ಜಿದಾರರಿಗೆ ಯಾವುದೇ ಅನ್ಯಾಯವನ್ನು ಮಾಡದಿದ್ದಾಗ್ಯೂ ಶಾಸನಾತ್ಮಕ ಉಪಬಂಧವನ್ನು ಮುಖ್ಯವಾಗಿ ಪಾಲಿಸಲಾಗಿದೆ ಎಂಬುದನ್ನು ಪರಿಗಣಿಸಬೇಕೆಂದು ನಿರ್ಣಯಿಸಿದೆ.ಹಾಗೆಯೇ, ಮಯಾಂಕ್ ಇಂಡಸ್ಟ್ರೀಸ್, ಇಂದೋರ್ -ವಿರುದ್ಧ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರರು 2010 ಎಸ್ಸಿಸಿ ಆನ್ಲೈನ್ ಡಿಆರ್‌ಟಿ 37 ಮೊಕದ್ದಮೆಯಲ್ಲಿ, ಅಲಹಾಬಾದ್ನ ಡಿಆರ್‌ಟಿಯ ಅಧ್ಯಕ್ಷರು, ಬಾಕಿ ಇರುವ ಮೊತ್ತಗಳನ್ನು ಉಲ್ಲೇಖಿಸುವಲ್ಲಿನ ಮುದ್ರಣ ದೋಷಗಳು ಅಥವಾ ಕೇವಲ ತಾಂತ್ರಿಕ ಉಲ್ಲಂಘನೆಗಳು, ನಿಯಮಗಳ ಉಪಬಂಧಗಳ ಉಲ್ಲಂಘನೆಯಾಗಿದೆ ಎಂದು ನಿರ್ಣಯಿಸಲು ಪರಾಪ್ತವಾಗುವುದಿಲ್ಲವೆಂದು ನಿರ್ಣಯಿಸಿದ್ದಾರೆ.ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ -ವಿರುದ್ಧ-ಮಾನ್ಯ ಸಾಲ ವಸೂಲು ಅಪೀಲು ನ್ಯಾಯಾಧಿಕರಣ ಮತ್ತು ಇತರರು ಡಬ್ಲ್ಯುಪಿ (ಸಿ)ಸಂಖ್ಯೆ: 9090/2009 ಮೊಕದ್ದಮೆಯಲ್ಲಿ ಮತ್ತು ತತ್ಸಂಬಂಧಿ ವಿಷಯಗಳಲ್ಲಿ, ದೆಹಲಿ ನ್ಯಾಯಾಲಯದ ವಿಭಾಗೀಯ ಪೀಠವು, ಅಡಮಾನದಾರನಿಗೆ ಯಾವುದೇ ಬಾಧಕವುಂಟಾಗದಿದ್ದಾಗ, ತಾಂತ್ರಿಕ ದೋಷದ ಪ್ರಯೋಜನವನ್ನು ಪಡೆಯಲು ಆತನಿಗೆ ಅವಕಾಶ ನೀಡಬಾರದು ಎಂದು ನಿರ್ಣಯಿಸಿದೆ.

7. ಇದಲ್ಲದೆ, ಪ್ರತ್ಯರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ಇದರಲ್ಲಿನ ಅರ್ಜಿದಾರರುದಿನಾಂಕ: 08.08.2017 ರಂದು ಬರೆದ ಪತ್ರಕ್ಕೆ ಮೊದಲನೇ ಪ್ರತ್ಯರ್ಜಿದಾರರು ನೀಡಿದ ಉತ್ತರದಿಂದ, ತಗಾದೆ ನೋಟೀಸನ್ನು ' ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ' ನೀಡಿದೆಯೇ ಹೊರತು ' ಎಲ್ & ಟಿ ಫೈನಾನ್ಸ್ ಲಿಮಿಟೆಡ್ ' ಅಲ್ಲವೆಂಬುದು ಕಂಡುಬರುತ್ತದೆ ಎಂಬುದರ ಕಡೆ ಗಮನ ಸೆಳೆದಿದ್ದಾರೆ.ಇದಲ್ಲದೆ, ಇದುದಿನಾಂಕ: 01.09.2017 ರ ಉತ್ತರದಲ್ಲಿ ಮೊದಲನೇ ಪ್ರತ್ಯರ್ಜಿದಾರರು ನೀಡಲಾಗಿದ್ದ ಈ ಸ್ಪಷ್ಟನೆಯಾಗಿದ್ದು, ಅರ್ಜಿದಾರರು ಅದರ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ನಿವೇದಿಸಿಕೊಂಡಿದ್ದಾರೆ.ದಿನಾಂಕ: 01.09.2017 ರ ಉತ್ತರದಲ್ಲಿ, ಮೊದಲನೇ ಪ್ರತ್ಯರ್ಜಿದಾರರು, ಅರ್ಜಿದಾರರು ನೀಡಿದದಿನಾಂಕ: 08.08.2017 ರ ಉತ್ತರಕ್ಕೆ ವಿನಾಯಿತಿ ಪಡೆದುಕೊಂಡು, ' ಎಲ್ & ಟಿ ಫೈನಾನ್ಸ್ ಲಿಮಿಟೆಡ್'ಗೆ ಪತ್ರ ಬರೆದಿದ್ದಾರೆ.ಆದುದರಿಂದ, ' ಎಲ್ & ಟಿ ಫೈನಾನ್ಸ್

ಲಿಮಿಟೆಡ್ ' ವಾಸ್ತವವಾಗಿ ಭದ್ರತೆ ಪಡೆದಿರುವ ಸಾಲಗಾರ ಸಂಸ್ಥೆಯಾಗಿದೆ ಮತ್ತು ಭದ್ರತೆ ಪಡೆದಿರುವ ಸಾಲಗಾರ ಸಂಸ್ಥೆಯೇ ಯೇ ತಗಾದೆ ನೋಟೀಸನ್ನು ನೀಡಿದೆ ಎಂದು ಮೊದಲನೇ ಪ್ರತ್ಯರ್ಜಿದಾರರು ಸ್ಪಷ್ಟಪಡಿಸಿದ್ದಾರೆ.

8. ಅರ್ಜಿದಾರರ ಪರ ಮತ್ತು ಮೊದಲನೇ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳ ವಾದಗಳನ್ನು ನಾವು ಆಲಿಸಿದ್ದೇವೆ.ರಿಟ್ ಪತ್ರಗಳು ಹಾಗೂ ಡಿಆರ್ಟಿ ಮತ್ತು ಡಿಆರ್ಟಿ ಹೊರಡಿಸಿದ ಆದೇಶಗಳನ್ನು ನಾವು ಅವಲೋಕಿಸಿದ್ದೇವೆ.

9. ತಗಾದೆ ನೋಟೀಸನ್ನು ' ಎಲ್ & ಟಿ ಫೈನಾನ್ಸ್ ಲಿಮಿಟೆಡ್'ನ ವಿಳಾಸದೋಲೆಯಲ್ಲಿ ನೀಡಿದ್ದು, ' ಎಲ್ & ಟಿ ಫೈನಾನ್ಸ್ ಲಿಮಿಟೆಡ್'ನ ಅಧಿಕೃತವಾಗಿ ಸಹಿ ಮಾಡುವವರು ಸಹಿ ಹಾಕಿದ್ದಾರೆ ಎಂಬ ಸಂಗತಿಯನ್ನು ಡಿಆರ್ಟಿ ಮತ್ತು ಡಿಆರ್ಎಟಿ ಗಮನಿಸಿದ್ದಾರೆ.ತಗಾದೆ ನೋಟೀಸಿನ ಅಡಿ ಟಿಪ್ಪಣಿಯಲ್ಲಿ ' ಎಲ್ & ಟಿ ಫೈನಾನ್ಸ್ ಲಿಮಿಟೆಡ್ ' ಎಂದು ಮುದ್ರಿಸಲಾಗಿದೆ ಎಂಬುದಾಗಿ ವಾದಿಸಿದಾಗ್ಯೂ, ವಾಸ್ತವವಾಗಿ ' ಎಲ್ & ಟಿ ಫೈನಾನ್ಸ್ ಲಿಮಿಟೆಡ್ ' ತಗಾದೆ ನೋಟೀಸನ್ನು ನೀಡಿತ್ತೆಂದು ಡಿಆರ್ಟಿ ಮತ್ತು ಡಿಆರ್ಟಿ ನಿರ್ಣಯಿಸಿವೆ.ಆದಾಗ್ಯೂ, ಇದನ್ನು ' ತಪ್ಪು ' ಎಂದು ಡಿಆರ್ಎಟಿ ಹೇಳಿದೆ.ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಇದು ತಪ್ಪು ಮತ್ತು ಸರಿಪಡಿಸಬಹುದಾದ ತಪ್ಪೆಂಬುದು ಡಿಆರ್ಎಟಿ ಅಭಿಪ್ರಾಯವಾಗಿದೆ.ಮೊದಲನೇ ಪ್ರತ್ಯರ್ಜಿದಾರರು ನೀಡಿದದಿನಾಂಕ: 01.09.2017 ರ ಉತ್ತರದಲ್ಲಿ ಸ್ಪಷ್ಟೀಕರಣ ನೀಡಿರುವುದರಿಂದ ' ತಪ್ಪನ್ನು ಸರಿಪಡಿಸಲಾಗಿದೆ ' ಎಂದು ನಿರ್ಣಯಿಸಲು ಡಿಆರ್ಎಟಿ ಮುಂದಾಗಿದೆ.

10. ಪರಿಗಣನೆಗೆ ಉದ್ಭವಿಸಿದಂಥ ಪ್ರಶ್ನೆಗಳೆಂದರೆ:

1) ದಿನಾ ೦ ಕ:14.06.2017 ರ ತಗಾದೆ ನೋಟೀಸನ್ನು, ಎಸ್ಎಆರ್ಎಫ್ಎಇಎಸ್ಐ ಅಧಿನಿಯಮ, 2002 ರ 13 ( 2) ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ಸಿಂಧುವಾದ ತಗಾದೆ ನೋಟೀಸ್ ಎಂದು ನಿರ್ಣಯಿಸಬಹುದೇ?ಮತ್ತು;

1) ತಗಾದೆ ನೋಟೀಸು ದೋಷಯುಕ್ತವಾಗಿದ್ದರೆ, ದೋಷವನ್ನು ಸರಿಪಡಿಸಬಹುದೇ?

11. ಎಸ್ಆರ್ಎಫ್ಎಇಎಸ್ಐ ಅಧಿನಿಯಮ, 2002 ರ 13 ( 1) ಮತ್ತು ( 2) ನೇ ಪ್ರಕರಣಗಳನ್ನು ಈ ಕೆಳಗಿನಂತೆ ಓದಲಾಗಿದೆ:

"13. ಭದ್ರತಾ ಹಿತಾಸಕ್ತಿಯ ಜಾರಿ.

( 1) ಸ್ವತ್ತು ವರ್ಗಾವಣೆ ಅಧಿನಿಯಮ, 1882 ರ (1882 ರ 4) 69 ನೇ ಅಥವಾ 69 ಎ ಪ್ರಕರಣದಲ್ಲಿ ಏನೇ ಇದ್ದರೂ, ಯಾರೇ ಭದ್ರತೆ ಪಡೆದ ಸಾಲಕಾರನ ಪರವಾಗಿ ಸೃಜಿಸಲಾದ ಯಾವುದೇ ಭದ್ರತಾ ಹಿತಾಸಕ್ತಿಯನ್ನು, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ಸಾಲಗಾರನು ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಹಸ್ತಕ್ಷೇಪವಿಲ್ಲದೆ ಜಾರಿ ಮಾಡಬಹುದು.

( 2) ಭದ್ರತಾ ಒಪ್ಪಂದದ ಮೇರೆಗೆ, ಭದ್ರತೆ ಪಡೆದ ಸಾಲಗಾರನಿಗೆ ನೀಡಬೇಕಾದ ಹೊಣೆಗಾರಿಕೆಯನ್ನು ಹೊಂದಿರುವ ಯಾರೇ ಸಾಲ ಪಡೆದಾತನು, ಭದ್ರತೆ ಪಡೆದ ಸಾಲವನ್ನು ಅಥವಾ ಅದರ ಯಾವುದೇ ಕಂತನ್ನು ಮರು-ಸಂದಾಯ ಮಾಡುವಲ್ಲಿ ಯಾವುದೇ ರೀತಿಯಲ್ಲಿ ತಪ್ಪಿದಲ್ಲಿ ಮತ್ತು ಅಂಥ ಸಾಲದ ಸಂಬಂಧದಲ್ಲಿನ ಆತನ ಲೆಕ್ಕವನ್ನು, ಪಾಲಿಸದಿರುವ ಸ್ವತ್ತಾಗಿ ಭದ್ರತೆ ಪಡೆದ ಸಾಲಗಾರನು ವರ್ಗೀಕರಿಸಿದಲ್ಲಿ, ಆಗ, ಭದ್ರತೆ ಪಡೆದ ಸಾಲಗಾರನು ಲಿಖಿತದಲ್ಲಿ ನೀಡುವ ನೋಟೀಸಿನ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಭದ್ರತೆ ಪಡೆದ

ಸಾಲಗಾರನಿಗೆ ತನ್ನ ಹೊಣೆಗಾರಿಕೆಗಳನ್ನು ಪೂರ್ಣವಾಗಿ ತೀರಿಸಲು ನೋಟೀಸು ನೀಡುವ ಮೂಲಕ ಸಾಲ ಪಡೆದವನಿಗೆ ಅಗತ್ಯಪಡಿಸಬಹುದು, ಅದಕ್ಕೆ ವಿಫಲನಾದಲ್ಲಿ, ( 4) ನೇ ಉಪ-ಪ್ರಕರಣದ ಮೇರೆಗೆ ಎಲ್ಲಾ ಅಥವಾ ಯಾವುದೇ ಹಕ್ಕುಗಳನ್ನು/ಹಕ್ಕನ್ನು ಚಲಾಯಿಸಲು ಭದ್ರತೆ ಪಡೆದ ಸಾಲಗಾರನು ಹಕ್ಕುಳ್ಳವನಾಗಿರತಕ್ಕದ್ದು.

[ಪರಂತು,

(1) ಈ ಉಪ-ಪ್ರಕರಣದ ಅಡಿಯಲ್ಲಿ ಪಾಲಿಸದಿರುವ ಸ್ವತ್ತಾಗಿ ಭದ್ರತೆ ಪಡೆದ ಸಾಲದ ವರ್ಗೀಕರಣದ ಅಗತ್ಯತೆಯನ್ನು, ಸಾಲ ಭದ್ರತೆಗಳನ್ನು ನೀಡುವ ಮೂಲಕ ನಿಧಿಗಳನ್ನು ಎತ್ತಿದ ಸಾಲ ಪಡೆದವನಿಗೆ ಅನ್ವಯಿಸತಕ್ಕದ್ದಲ್ಲ; ಮತ್ತು

(ii) ಇದಕ್ಕೆ ತಪ್ಪಿದ ಸಂದರ್ಭದಲ್ಲಿ, ಅವಶ್ಯವಿರಬಹುದಾದ ಮತ್ತು ಡಿಬೆಂಚರ್ ಟ್ರಸ್ಟಿಯ ಪರವಾಗಿ ಬರೆದುಕೊಟ್ಟ ಭದ್ರತಾ ದಸ್ತಾವೇಜುಗಳ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿರುವ ಅಂಥ ಮಾರ್ಪಾಡುಗಳೊಂದಿಗೆ ಈ ಪ್ರಕರಣದ ಮೇರೆಗೆ ಉಪಬಂಧಿಸಲಾದಂತೆ ಅದೇ ರೀತಿಯಲ್ಲಿ ಭದ್ರತಾ ಹಿತಾಸಕ್ತಿಯನ್ನು ಜಾರಿಗೊಳಿಸಲು ಡಿಬೆಂಚರ್ ಟ್ರಸ್ಟಿಯು ಹಕ್ಕುಳ್ಳವನಾಗಿರತಕ್ಕದ್ದು.

12. ಮ್ಯಾಥೀವ್ ವರ್ಗಿಸ್ -ವಿರುದ್ಧ-ಎಮ್.ಅಮೃತಾ ಕುಮಾರ್ (ಮೇಲೆ ಹೇಳದ) ಮೊಕದ್ದಮೆಯಲ್ಲಿ ಮತ್ತು ಹಲವು ಇತರ ತೀರ್ಪುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಎಸ್ಎಆರ್ಎಫ್ಎಇಎಸ್ಐ ಅಧಿನಿಯಮದ ಉಪಬಂಧಗಳ ಜಾರಿಯು, ಅಧಿನಿಯಮದ ಉಪಬಂಧಗಳೊಂದಿಗೆ ಕಡ್ಡಾಯವಾಗಿ ಅನುರೂಪವಾಗಿರಬೇಕು ಎ ೦ ದು ನಿರ್ಣಯಿಸಿದೆ.ಮ್ಯಾಥಿವ್ ವರ್ಗಿಸ್ ಮೊಕದ್ದಮೆಯಲ್ಲಿ, ಅಧಿನಿಯಮದ 13 ( 1) ನೇ ಪ್ರಕರಣದೊಂದಿಗೆ ವ್ಯವಹರಿಸುವಾಗ, ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಹಸ್ತಕ್ಷೇಪವಿಲ್ಲದೆ, ಭದ್ರತೆ ಪಡೆದ ಸಾಲಗಾರರ ಪರವಾಗಿ ಸೃಜಿಸಿದ ಯಾವುದೇ ಭದ್ರತೆ ಪಡೆದ ಹಿತಾಸಕ್ತಿಯನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಭದ್ರತೆ ಪಡೆದ ಸಾಲಗಾರರಿಗೆ ಮುಕ್ತ ಅವಕಾಶವನ್ನು ನೀಡಬೇಕೆಂದು ನಿರ್ಣಯಿಸಲಾಗಿದೆ.ಈ ಉಪ-ಪ್ರಕರಣದಲ್ಲಿ ಇರುವ ಇತರ ಸುಸಂಗತ ಅಂಶವೆಂದರೆ, ಅಂಥ ನೀಡುವಿಕೆಯು ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿರಬೇಕೆಂಬುದಾಗಿದೆ.ಆದುದರಿಂದ, 13 ( 1) ನೇ ಪ್ರಕರಣದ ಓದುವಿಕೆಯಿಂದ, ಯಾವುದೇ ನ್ಯಾಯಾಲಯ ವ್ಯವಹರಣೆಗಳನ್ನು ಆಶ್ರಯಿಸದೆ ಅಥವಾ ನ್ಯಾಯಾಧಿಕರಣವನ್ನು ಸಂಪರ್ಕಿಸದೆ, ಯಾವುದೇ ಭದ್ರತೆ ಪಡೆದ ಸಾಲಗಾರ ಸಂಸ್ಥೆಯು ಸ್ವತಃ ಅದರ ಪರವಾಗಿ ಸೃಜಿಸಿದ ಭದ್ರತೆ ಪಡೆದ ಸ್ವತ್ತಿಗೆ ಒತ್ತಾಯಿಸಲು ಹಕ್ಕುಳ್ಳದ್ದಾಗಬಹುದು ಎಂಬ ಪರಿಣಾಮವು ಸ್ಪಷ್ಟವಾಗುತ್ತದೆ, ಅಂಥ ಒತ್ತಾಯವು ಎಸ್ಎಆರ್ಎಫ್ಎಇಎಸ್ಐ ಅಧಿನಿಯಮದ ಇತರ ಉಪಬಂಧಗಳಿಗೆ ಅನುಗುಣವಾಗಿರಬೇಕು.

13. 13 ( 2) ನೇ ಪ್ರಕರಣವು, ತಗಾದೆ ನೋಟೀಸನ್ನು ನೀಡಲು ' ಭದ್ರತೆ ಪಡೆದ ಸಾಲಗಾರ'ನಿಗೆ ಅಧಿಕಾರ ನೀಡುತ್ತದೆ.ಇದರಲ್ಲಿನ ಅರ್ಜಿದಾರರು ' ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್'ನಿಂದ ಸಾಲ ಪಡೆದವರು ಎಂಬುದರಲ್ಲಿ ಯಾವುದೇ ವಿವಾದವಿಲ್ಲ. 'ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ' ಭದ್ರತೆ ಪಡೆದ ಸಾಲಗಾರ ಸಂಸ್ಥೆ ಎಂಬುದನ್ನು ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. 'ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ' ಮತ್ತು ' ಎಲ್ & ಟಿ ಫೈನಾನ್ಸ್ ಲಿಮಿಟೆಡ್ ' ಇವು ಎರಡು ಪ್ರತ್ಯೇಕ ಮತ್ತು ವಿಭಿನ್ನ ಸಂಸ್ಥೆಗಳು ಎಂಬ ಸಂಗತಿಯನ್ನು ಒಪ್ಪಿಕೊಳ್ಳಲಾಗಿದೆ.ಮೊದಲನೇ ಪ್ರತ್ಯರ್ಜಿದಾರರು ಅವರ ನ್ಯಾಯವಾದಿಗಳು ಮತ್ತು ಕಾನೂನು ಸಮಾಲೋಚಕರ ಮೂಲಕ ನೀಡಿದದಿನಾಂಕ: 01.09.2017 ರ ಉತ್ತರದ ನೋಟೀಸಿನಿಂದ ಇದು

ರುಜುವಾತಾಗುತ್ತದೆ.66...... ಮುಂಗಡಗಳನ್ನು ಪಡೆದಿದ್ದಂಥ ನಿಮ್ಮ ಕಕ್ಷಿದಾರರಿಗೆದಿನಾಂಕ: 14.06.2017 ರ ಸದರಿ ನೋಟೀಸನ್ನು ನೀಡಿರುವ ನಮ್ಮ ಕಕ್ಷಿದಾರರಿಗೆ ಇದನ್ನು ಬರೆದಿರುವುದಿಲ್ಲವಾದರೂ, ನಿಮ್ಮ ಕಕ್ಷಿದಾರರಿಗೆ ತಿಳಿದಿರುವ ಕಾರಣಕ್ಕಾಗಿ ದುರುದ್ದೇಶದಿಂದ ಮತ್ತೊಂದು ವಿಳಾಸದಲ್ಲಿ ಉದ್ದೇಶಪೂರ್ವಕವಾಗಿಯೇ ಮತ್ತೊಂದು ನಿಗಮಿತ ನಿಕಾಯಕ್ಕೆ ಬರೆಯಲಾಗಿದೆ ” ಎಂದು ವಿಶೇಷವಾಗಿ ಹೇಳಲಾಗಿದೆ.

14. ಈ ಒಪ್ಪಿಕೊಂಡು ನಿಲುವಿನೊಂದಿಗೆ,ದಿನಾಂಕ: 01.09.2017 ರ ನೀಡಿದ ಉತ್ತರವು ಸ್ಪಷ್ಟೀಕರಣದ ಮಾರ್ಗವೇ, ತಗಾದೆ ನೋಟೀಸನ್ನು, ' ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ' ನೀಡಿದ ನೋಟಿಸ್ ಎಂಬಂತೆ ಅರ್ಥೈಸಬೇಕೇ ಮತ್ತು ತಗಾದೆ ನೋಟೀಸಿನಲ್ಲಿ ಕಂಡುಬಂದ ದೋಷವನ್ನು ಸರಿಪಡಿಸಲಾಗಿದೆ ಎಂದು ಅರ್ಥೈಸಬೇಕೇ ಎಂಬುದನ್ನು ನಾವು ವ್ಯವಹರಿಸಬೇಕಿದೆ.

15. ಈ ಹಿಂದೆ ಗಮನಿಸಿದಂತೆ, ಅಧಿನಿಯಮದ ಉಪಬಂಧಗಳನ್ನು ನಿಖರವಾಗಿ ಅರ್ಥೈಸಬೇಕಾದ ಅಗತ್ಯವಿದೆ.ತಗಾದೆ ನೋಟೀಸನ್ನು ' ಎಲ್ & ಟಿ ಫೈನಾನ್ಸ್ ಲಿಮಿಟೆಡ್ ' ನೀಡಿದ್ದು, ಅದರ ಅಧಿಕೃತ ಸಹಿ ಮಾಡುವವರು ನೋಟೀಸಿಗೆ ಸಹಿ ಹಾಕಿದ್ದಾರೆ ಎಂಬುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ.ಮೊದಲನೇ ಪ್ರತ್ಯರ್ಜಿದಾರರ ವಾದವೆಂದರೆ, ಇದರಲ್ಲಿನ ಅರ್ಜಿದಾರರು, ಸೂಕ್ತ ಭದ್ರತೆ ಪಡೆದ ಸಾಲಗಾರ ಸಂಸ್ಥೆಗೆ ಸಂಬಂಧಿಸಿದಂತೆದಿನಾಂಕ: 08.08.2017 ರ ಉತ್ತರದ ನೋಟೀಸಿನಲ್ಲಿ ಯಾವುದೇ ಆಕ್ಷೇಪಣೆಯನ್ನು ಎತ್ತಿರುವುದಿಲ್ಲ.ಅರ್ಜಿದಾರ ಸಂಸ್ಥೆಯು ಯಾವುದೇ ಅಂಥ ಆಕ್ಷೇಪಣೆಯನ್ನು ಎತ್ತಿಲ್ಲದೆ ಇರುವುದರಿಂದ, ಅದರ ನಡವಳಿಕೆಯ ಮೂಲಕ ಆಕ್ಷೇಪಣೆಯನ್ನು ಬಿಟ್ಟುಕೊಟ್ಟಿದ್ದು ಅಥವಾ ಎತ್ತಿರುವುದಿಲ್ಲವಾದುದರಿಂದ, ನಂತರದ ಹಂತದಲ್ಲಿ ಆಕ್ಷೇಪಣೆಯನ್ನು ಎತ್ತಲು ಅನುಮತಿ ನೀಡಲಾಗುವುದಿಲ್ಲವೆಂದು ಸಹ ವಾದಿಸಲಾಗಿದೆ.

16. ಕನ್ವರ್ ಸಿಂಗ್ ಸೈನಿ -ವಿರುದ್ದ-ದೆಹಲಿ ಉಚ್ಚ ನ್ಯಾಯಾಲಯ 2012 4 ಎಸ್ಸಿಸಿ 30 ಮೊಕದ್ದಮೆಯಲ್ಲಿ, ಅಧಿಕಾರವ್ಯಾಪ್ತಿಯ ನೀಡುವಿಕೆಯು ಶಾಸನಾತ್ಮಕ ಪ್ರಕಾರವಾಗಿದ್ದು, ಅದನ್ನು ಪಕ್ಷಕಾರರ ಸಮ್ಮತಿಯಿಂದಾಗಲಿ ಅಥವಾ ವರಿಷ್ಠ ನ್ಯಾಯಾಲಯವಾಗಲಿ ನೀಡಲಾಗುವುದಿಲ್ಲ ಮತ್ತು ವಿಷಯದ ಮೇಲೆ ಅಧಿಕಾರವ್ಯಾಪ್ತಿ ಇರದೆ ಒಂದು ನ್ಯಾಯಾಲಯವು ಆದೇಶವನ್ನು/ಡಿಕ್ರಿಯನ್ನು ಹೊರಡಿಸಿದ್ದರೆ, ವಿಷಯವು ಕಾರಣದ ಮೂಲಕ್ಕೆ ಹೋಗುವುದರಿಂದಾಗಿ ಅದು ಅಕೃತವಾಗುತ್ತದೆ ಎಂಬ ಇತ್ಯರ್ಥಗೊಂಡ ಕಾನೂನು ನಿಲುವಿಗೆ ಸಂಬಂಧಿಸಿದಂತೆ ಯಾವುದೇ ವಿವಾದವಿರುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ.ಅಪೀಲು ಅಥವಾ ಜಾರಿಯನ್ನು ಚ ಒಳಗೊಂಡು ವ್ಯವಹರಣೆಗಳ ಯಾವುದೇ ತಡವಾದ ಹಂತದಲ್ಲಿ ಅಂಥ ವಿವಾದವನ್ನು ಎತ್ತಬಹುದಾಗಿದೆ.ಪಕ್ಷಕಾರರು ಆಕ್ಷೇಪಣೆ ಎತ್ತದಿರುವುದನ್ನು, ಶಾಸನಾತ್ಮಕ ಕ್ರಮವನ್ನು ವಿಫಲಗೊಳಿಸಲು ಅನುಮತಿಸಲಾಗದು.ಶಾಸನದಿಂದ ಬೇರೆಯಾದ ಅಧಿಕಾರವ್ಯಾಪ್ತಿಯನ್ನು ನ್ಯಾಯಾಲಯವು ಪಡೆಯಲಾಗುವುದಿಲ್ಲ.

ಶಾಸನಾತ್ಮಕ ಅಧಿಕಾರವ್ಯಾಪ್ತಿಯ ವಿಷಯಗಳಲ್ಲಿ ಇದು ನಿಲುವಾಗಿದ್ದರೆ, ವಿಷಯದ ಮೂಲಕ್ಕೆ ಹೋಗುವ ದೋಷವಿರುವ ಕರಾರಿನ ವಿಷಯವಾಗಿದ್ದಲ್ಲಿ,ಆಗ ಅಂಥ ದೋಷವನ್ನು ನಿರ್ಲಕ್ಷಿಸಲಾಗುವುದು ಎಂದು ಎ ೦ ದಿಗೂ ಊಹಿಸಲಾಗುವುದಿಲ್ಲವಾದರೂ, ಅಂಥ ನಿರ್ಲಕ್ಷ್ಯವು, ವ್ಯಕ್ತ ಸಮ್ಮತಿಯಾಗಿರಬೇಕು.ಒಂದು ಕೆಲಸವನ್ನು ನಿರ್ದಿಷ್ಟ ರೀತಿಯಲ್ಲಿ ಮಾಡಬೇಕೆಂದು ಶಾಸನವು ಉಪಬಂಧಿಸಿದರೆ, ಆಗ ಅದನ್ನು ಅದೇ ರೀತಿಯಲ್ಲಿ ಮಾಡಬೇಕಾಗುತ್ತದೆಯೇ ಹೊರತು ಇತರ ಯಾವುದೇ ರೀತಿಯಲ್ಲಿ ಅಲ್ಲ ಎಂಬ ಇತ್ಯರ್ಥಗೊಂಡ ತತ್ವಗಳು, ಅಧಿನಿಯಮದ 13 ( 2) ನೇ ಪ್ರಕರಣವು ಸಾಲ ಪಡೆದವನ ವಿರುದ್ಧ ಕ್ರಮ ಪ್ರಾರಂಭಿಸಲು ಭದ್ರತೆ ಪಡೆದ

ಸಾಲಗಾರನಿಗೆ ಮಾತ್ರವೇ ಅಧಿಕಾರ ನೀಡುತ್ತದೆ ಎಂಬ ಸಂಗತಿಯನ್ನು ಗಮನದಲ್ಲಿರಿಸಿಕೊಂಡು, ಈ ವಿಷಯದಲ್ಲಿ ಒತ್ತಾಯಪೂರ್ವಕವಾಗಿ ಅನ್ವಯವಾಗುತ್ತವೆ.

17.ದಿನಾಂಕ: 14.06.2017 ರ ತಗಾದೆ ನೋಟೀಸಿನಲ್ಲಿನ ದೋಷವು ವಿಷಯದ ಮೂಲಕ್ಕೆ ಹೋಗುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.ಆ ದಿನಾಂಕದಂದು ಭದ್ರತೆ ಪಡೆದ ಸಾಲಗಾರ ಸಂಸ್ಥೆ ಎಂದರೆ ' ಎಲ್ & ಟಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ' ಯಾವುದೇ ಸಿಂಧುವಾದ ತಗಾದೆ ನೋಟೀಸನ್ನು ನೀಡಿರುವುದಿಲ್ಲ ಎಂಬ ಅರ್ಜಿದಾರರ ವಾದವನ್ನು ನಾವು ಎತ್ತಿ ಹಿಡಿಯುತ್ತೇವೆ.ದಿನಾಂಕ: 14.06.2017 ರ ತಗಾದೆ ನೋಟೀಸಿಗೆ ಅರ್ಜಿದಾರರು ನೀಡಿದ ಉತ್ತರದ ನೋಟೀಸಿನಲ್ಲಿ ಎತ್ತದಿರುವಂಥ ಅಪ್ರಸ್ತುತ ವಿಷಯವನ್ನು ಎತ್ತಲು ಅರ್ಜಿದಾರರು ಕಾನೂನುಬದ್ಧವಾಗಿ ಹಕ್ಕುಳ್ಳವರಾಗಿದ್ದಾರೆ ಎಂಬುದನ್ನು ಸಹ ನಾವು ಎತ್ತಿ ಹಿಡಿಯುತ್ತೇವೆ.ಹೀಗೆ ಎತ್ತಿಹಿಡಿಯಲು ಇರುವ ಮತ್ತೊಂದು ಕಾರಣವೆಂದರೆ, ನಿಕಟವಾಗಿರುವ ಸಂಸ್ಥೆಯ ಹೆಸರಿನಲ್ಲಿ ದೋಷವನ್ನು ಇನ್ನೂ ಹೆಚ್ಚಾಗಿ, ಎರಡು ಸಂಸ್ಥೆಗಳ ಹೆಸರಿನಲ್ಲಿನ ಸಾಮ್ಯತೆಯ ಕಾರಣದಿಂದ ಅರ್ಜಿದಾರರು ಗಮನಿಸದಿರುವ ಸಾಧ್ಯತೆ ಇದೆ ಮತ್ತು ಒಮ್ಮೆ ಅದನ್ನು ಗಮನಿಸಿದ್ದರೆ, ಅರ್ಜಿದಾರರು ಮೇಲೆ ಹೇಳಿದ ಕಾರಣಗಳ ಮೇಲೆ ವಿಷಯವನ್ನು ಕುರಿತು ವಾದಿಸಲು ಅವರು ಮುಂದಾಗುತ್ತಿದ್ದರು ಎಂಬುದಾಗಿದೆ.ಅರ್ಜಿದಾರರಿಗೆ ಯಾವುದೇ ಸ್ಪಷ್ಟ ಬಾಧಕ ಉಂಟಾಗಿಲ್ಲ ಎಂಬ ಮೊದಲನೇ ಪ್ರತ್ಯರ್ಜಿದಾರರ ವಾದವನ್ನು, ತಗಾದೆ ನೋಟೀಸನ್ನು ಭದ್ರತೆ ಪಡೆದ ಸಾಲಗಾರರು ನೀಡದಿರುವುದರಿಂದ, ಅದು ಅಸಿಂಧುವಾಗಿದ್ದು, ಭದ್ರತೆ ಪಡೆದ ಸಾಲಗಾರನಾಗಿರದ ವ್ಯಕ್ತಿ ಅಥವಾ ಕಾನೂನಬದ್ದ ಸಂಸ್ಥೆಯು ತಗಾದೆ ಮಾಡಿರುವುದು, ಖಂಡಿತವಾಗಿಯೂ ಅರ್ಜಿದಾರನ ಹಿತಾಸಕ್ತಿಗೆ ಬಾಧಕವಾದುದಾಗಿದೆ ಎಂಬ ಕಾರಣಕ್ಕಾಗಿ ಸಮರ್ಥಿಸಲಾಗುವುದಿಲ್ಲ.

18. ಮೊದಲನೇ ಪ್ರತ್ಯರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ಅವಲಂಬಿಸಿದ ನಿರ್ಣಯಗಳು ಮುದ್ರಣ ದೋಷಗಳು ಅಥವಾ ಅಲ್ಪಾವಧಿ ನೋಟೀಸುಗಳಿರುವ ವಿಷಯಗಳಿಗೆ ಸಂಬಂಧಿಸಿವೆಯಾದ್ದರಿಂದ, ಅಂಥ ತಪ್ಪುಗಳು ಸರಿಪಡಿಸಬಹುದಾದವುಗಳಾಗಿವೆ ಮತ್ತು ಅವು ಇಡೀ ವ್ಯವಹರಣೆಗಳನ್ನೇ ನಿರರ್ಥಕಗೊಳಿಸುವುದಿಲ್ಲವೆಂದು ನಿರ್ಣಯಿಸಲಾಗಿದೆ.ಆ ನಿರ್ಣಯಗಳಿಂದ ಮೊದಲನೇ ಪ್ರತ್ಯರ್ಜಿದಾರರನ್ನು ರಕ್ಷಿಸಲಾಗುವುದಿಲ್ಲ.

19. ಮೇಲೆ ಹೇಳಿದ ಕಾರಣಗಳಿಗಾಗಿ, ಈ ಮುಂದಿನ ಆದೇಶವನ್ನು ನಾವು ಹೊರಡಿಸಿದ್ದೇವೆ:

ಆದೇಶ

ಅರ್ಜಿಯನ್ನು ಪುರಸ್ಕರಿಸಲಾಗಿದೆ.ಆರ್.ಎ. (ಎಸ್)ಸಂಖ್ಯೆ: 108/2018 ರಲ್ಲಿ ಸಾಲ ವಸೂಲಾತಿ ಅಪೀಲು ನ್ಯಾಯಾಧಿಕರಣ, ಚೆನ್ನೈ ಹೊರಡಿಸಿರುವದಿನಾಂಕ: 16.04.2019 ರ ಪ್ರಶ್ನಿತ ಆದೇಶವನ್ನು ಈ ಮೂಲಕ ತಳ್ಳಿ ಹಾಕಲಾಗಿದೆ.ತತ್ಪರಿಣಾಮವಾಗಿ, ಸಾಲ ವಸೂಲಾತಿ ನ್ಯಾಯಾಧಿಕರಣ -1, ಬೆಂಗಳೂರು ಇವರು ಎಸ್.ಎ.ಸಂಖ್ಯೆ: 76/2018 ರಲ್ಲಿ ಹೊರಡಿಸಿದದಿನಾಂಕ: 23.03.2018 ರ ಆದೇಶವನ್ನು ಎತ್ತಿಹಿಡಿಯಲಾಗಿದೆ ಮತ್ತುದಿನಾಂಕ: 14.06.2017 ರ ತಗಾದೆ ನೋಟೀಸನ್ನು ಹಾಗೂದಿನಾಂಕ: 09.11.2017 ಮತ್ತು 10.11.2017 ರ ಸ್ವಾಧೀನ ನೋಟೀಸುಗಳನ್ನು ರದ್ದುಗೊಳಿಸಲಾಗಿದೆ ಮತ್ತು ತಳ್ಳಿ ಹಾಕಲಾಗಿದೆ.